

## ಸಂವಿಧಾನ ಇಲ್ಲದಿದ್ದರೆ ನಮ್ಮ ಬದುಕು ಅಧೋಗತಿ

ಹಳ್ಳಿಯಲ್ಲೇ ಹುಟ್ಟಿ ಬೆಳೆದಿದ್ದೇನೆ. ವರ್ಣ ವ್ಯವಸ್ಥೆಯಲ್ಲಿ ಅನೇಕ ನಿರ್ಬಂಧಗಳಿದ್ದವು ಈಗಲೂ ದೇವಸ್ಥಾನ ಪ್ರವೇಶಕ್ಕೆ ನಿರ್ದಿಷ್ಟ ಜಾತಿಗಳಿಗೆ ಮಾತ್ರ ಅವಕಾಶ ಇದೆ. ಊರ ಸಮಾಜವೇ ಮಾಡಿಕೊಂಡಿರುವ ನಿಯಮ ಇದು. ಇಂತಹ ತಾರತಮ್ಯಕ್ಕೆ ಸಂವಿಧಾನ ಅವಕಾಶ ಕೊಡುವುದಿಲ್ಲ. ಆದರೂ ಅಲ್ಲಲ್ಲಿ ಸಂವಿಧಾನಬಾಹಿರ ಚಟುವಟಿಕೆಗಳು ನಡೆಯುತ್ತವೆ. ಅಂತಹ ದೋಷಗಳಿಗೆಲ್ಲ ಸಂವಿಧಾನವೇ ಪರಿಹಾರ.

ಈಗಲೂ ಬಾಲ್ಯವಿವಾಹದಂತಹ ಅನಿಷ್ಠ ಪದ್ಧತಿ ಇದೆ. ಸಂಪ್ರದಾಯಬದ್ಧ ಗ್ರಾಮ ಭಾರತದಲ್ಲಿ ಅನಕ್ಷರತೆ ಮತ್ತು ಕಾನೂನಿನ ತಿಳಿವಳಿಕೆ ಇಲ್ಲದೆ ಅನಿಷ್ಠವೂ ನಡೆಯುತ್ತದೆ. ಅದರ ವಿರುದ್ಧ ಶಿಕ್ಷಾರ್ಹ ಕಾನೂನು ರೂಪಿಸುವ ದಿಕ್ಸೂಚಿ ಸಂವಿಧಾನ. ಮಹಿಳೆಯರಿಗೆ ಆಸ್ತಿಯ ಹಕ್ಕು ಇರಲಿಲ್ಲ. ಕಾನೂನು ಜಾರಿಯಾದ ನಂತರ ಅವರಿಗೂ ಹಕ್ಕು ಇದೆ. ಮಹಿಳೆಗೂ ಆಸ್ತಿ ಹಕ್ಕು ಇರುವುದರಿಂದ ಅಕ್ಕ ತಂಗಿಯರನ್ನು ಗೌರವಿಸುವುದು, ಆತಿಥ್ಯ ಮಾಡುವುದನ್ನೂ ನಾನು ನೋಡಿದ್ದೇನೆ.

ಜಮೀನ್ದಾರಿ, ಜೀತಗಾರಿಕೆ ಪದ್ಧತಿ ಇವತ್ತು ಇಲ್ಲ ಎನ್ನುವುದಾದರೆ ಅದಕ್ಕೆ ಸಂವಿಧಾನವೇ ಕಾರಣ. ಕೆಲ ಸಮುದಾಯಗಳ ಅನಿಷ್ಠ ಪದ್ಧತಿಯನ್ನು ಸುದ್ದಿಪತ್ರಿಕೆಯಲ್ಲಿ ಈಗಲೂ ನೋಡುತ್ತೇವೆ. ಅದೆಲ್ಲ ಸಂವಿಧಾನದ ಕಣ್ಣುತಪ್ಪಿಸಿ ನಡೆಯುತ್ತವೆ. ದೇಶದ ಸಾಮಾನ್ಯನಿಗೆ ಅದುವೆ ಪರಮ ಶ್ರೇಷ್ಠ ಗ್ರಂಥ. ಅದಿಲ್ಲದಿದ್ದರೆ ನಮ್ಮ ಬದುಕು ಎಂತಹ ಅಧೋಗತಿಗೆ ಹೋಗುತ್ತಿತ್ತೋ ಊಹೆ ಮಾಡಿಕೊಳ್ಳಲು ಸಾಧ್ಯ ಇಲ್ಲ.

–ಎಂ. ರಾಜ ಉಜ್ಜಿನಿ ಕೊಟ್ಟೂರು, ವಿದ್ಯಾರ್ಥಿ

## ನಿತ್ಯವೂ ಅನುಭವಕ್ಕೆ ದಕ್ಕುತ್ತದೆ

ಮಾಧ್ಯಮ ಕಾನೂನು ಮತ್ತು ನೈತಿಕತೆ ಕುರಿತು ಅಧ್ಯಾಪನ ಮಾಡುವ ನನಗೆ ಸಂವಿಧಾನ ವೈಯಕ್ತಿಕ ಬದುಕಿನಷ್ಟೇ ವೃತ್ತಿ ಬದುಕಿಗೂ ಹತ್ತಿರವಾಗುತ್ತಿದೆ. ಅದನ್ನು ಪ್ರತಿ ದಿನವೂ ಅನುಭವಿಸುತ್ತಿದ್ದೇನೆ. ಸಂವಿಧಾನ ಜೀವನದ ಭಾಗ ಆಗಿದೆ. ನಿತ್ಯವೂ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ವಿದ್ಯಾರ್ಥಿಗಳ ಜೊತೆ ಅನುಸಂಧಾನ ಮಾಡುತ್ತಿರುತ್ತೇನೆ. ಇವತ್ತಿನ ಶಿಕ್ಷಣ ವ್ಯವಸ್ಥೆ ಕೂಡ ಸಂವಿಧಾನದ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿದೆ. ಆದರೂ ಆ ಬಗ್ಗೆ ಹೆಚ್ಚಿನ ಮಾಹಿತಿ ಬಹುಜನರಿಗೆ ಇಲ್ಲ. ಅನೇಕ ನಮ್ಮ ಸಮಸ್ಯೆಗಳಿಗೆ ಸಂವಿಧಾನದಲ್ಲಿ ಪರಿಹಾರ ಇದೆ. ಅದನ್ನು ಯುವಜನತೆಗೆ ತಿಳಿಸುವ ಕೆಲಸವನ್ನು ನಾವು ಮಾಡಬೇಕಿದೆ.

ನಮ್ಮ ಹಕ್ಕಿಗೆ ಯಾರೇ ಧಕ್ಕೆಯನ್ನು ತಂದರೂ ಸಂವಿಧಾನ ಬಳಸಿಯೇ ರಕ್ಷಣೆಯನ್ನು ಪಡೆದುಕೊಳ್ಳುತ್ತೇವೆ. ಅದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಾಗರಿಕರ ಹಕ್ಕು ಕರ್ತವ್ಯದ ಬಗ್ಗೆ ವಿವರಗಳು ಅದರಲ್ಲಿ ಇವೆ. ನಮಗಾಗಿಯೇ ಸಂವಿಧಾನ ರಚನೆ ಆಗಿದೆ. ಸಮಾಜದ ಚೌಕಟ್ಟಿನಲ್ಲಿ ನಾವು ಹೇಗೆ ಬದುಕಬೇಕು, ನಮ್ಮ ಕರ್ತವ್ಯ ಏನು ಅನ್ನುವುದನ್ನೂ ಸಂವಿಧಾನ ಸ್ಪಷ್ಟವಾಗಿ ಸೂಚಿಸುತ್ತದೆ.

ನಮ್ಮ ಹಕ್ಕುಗಳು ಏನು? ಬಾಧ್ಯತೆಗಳ ಬಗ್ಗೆ ತಿಳಿವಳಿಕೆ ಎಲ್ಲರಿಗೂ ಮೂಡಬೇಕಿದೆ. ಸಂವಿಧಾನವನ್ನು ಪಠ್ಯವಾಗಿ ಓದಿದ ಕಾರಣಕ್ಕೆ ಆ ಬಗ್ಗೆ ಅರಿವು ನನಗೆ ಮೂಡಿದೆ. ಆದರಿಂದಲೇ ಪ್ರಸ್ತುತ ಸಮಾಜದಲ್ಲಿ ನಿತ್ಯವೂ ಅದು ಹೇಗೆ ಸಹಭಾಗಿಯಾಗುತ್ತದೆ ಎನ್ನುವುದು ಅನುಭವಕ್ಕೆ ಬಂದಿದೆ.

ಮೂಲಭೂತ ಹಕ್ಕನ್ನು ದಯಪಾಲಿಸಿದ ಸಂವಿಧಾನ ಎಲ್ಲೂ ಕರ್ತವ್ಯವನ್ನು ಕಡ್ಡಾಯ ಎನ್ನುವ ನಿರ್ಬಂಧ ಹಾಕುವುದಿಲ್ಲ. ಈ ದೇಶದ ಪ್ರಜೆ ಸಂವಿಧಾನ ಸೂಚಿಸುವ ಕರ್ತವ್ಯ ಮಾಡದಿದ್ದರೂ ಯಾವ ದೋಷಾರೋಪವೂ ಎದುರಾಗುವುದಿಲ್ಲ. ಭಾರತೀಯ ಪ್ರಜೆಗಳಾದ ನಾವು ನಮ್ಮ ಕರ್ತವ್ಯವನ್ನೂ ಪಾಲಿಸಬೇಕು. ಶಿಕ್ಷಿತರು ಎನ್ನುವ ಕಾರಣಕ್ಕೆ ಮಾತ್ರವಲ್ಲ. ಒಳ್ಳೆಯ ನಾಗರಿಕನ ಲಕ್ಷಣವನ್ನು ತೋರಿಸಲು ಸಂವಿಧಾನದ ಅರಿವು ಇರಲೇಬೇಕು ಎನ್ನುವುದನ್ನು ಮನಗಂಡಿದ್ದೇನೆ.



–ದಿವ್ಯಾ ಕುಮಾರಿ ಕೆ.ಪಿ., ಸಹಾಯಕ ಪ್ರಾಧ್ಯಾಪಕಿ



## ಶಿಕ್ಷಣ ನಮ್ಮ ಹಕ್ಕು

ಭಾರತ ಸಂವಿಧಾನದ ಶ್ರೇಷ್ಠತೆ ನೆನಪಿಸಿಕೊಂಡರೆ ತುಂಬ ಹೆಮ್ಮೆ ಅನ್ನಿಸುತ್ತದೆ. ಒಬ್ಬ ನಾಗರಿಕಳಾಗಿ ಜೀವಿಸುವ ಎಲ್ಲ ರೀತಿಯ ಸಮಾನ ಹಕ್ಕು ಅದರಿಂದ ನನಗೆ ಸಿಕ್ಕಿದೆ. ಇಷ್ಟದ ಓದು, ಉದ್ಯೋಗ ಎಲ್ಲದಕ್ಕೂ ಸ್ವಾತಂತ್ರ್ಯ ಸಿಕ್ಕಿದೆ. ಒಂದು ಕಾಲದಲ್ಲಿ ಹೆಣ್ಣುಮಕ್ಕಳಿಗೆ ಶೈಕ್ಷಣಿಕ ನಿರ್ಬಂಧ ಇತ್ತು. ಆದರೆ ಸಂವಿಧಾನೋತ್ತರ ಭಾರತದಲ್ಲಿ ಅವಳಿಗೆ ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ ಸಮಾನ ಹಕ್ಕು ಸಿಕ್ಕಿದೆ. ಮಾತ್ರವಲ್ಲ ಸಮಾನ ದುಡಿಮೆಗೆ ಸಮಾನ ವೇತನವೂ ಸಾಧ್ಯ ಆಗಿದೆ.

ಮೂಲಭೂತ ಹಕ್ಕಾಗಿ ಶಿಕ್ಷಣ ಇರುವುದರಿಂದ ಅನೇಕರಿಗೆ ಓದಲು ಸಾಧ್ಯ ಆಗಿದೆ. ನಮ್ಮದು ರೈತ ಕುಟುಂಬ. ನಮಗೆ ಹೊಲ ತೋಟಗಳೇ ಜೀವನ ಆಶ್ರಯ. ಅದಕ್ಕೆ ಸೂಕ್ತ ಭದ್ರತೆ ಸೇರಿದಂತೆ ಅನುಭವಿಸುವ ಹಕ್ಕು ಸಿಕ್ಕಿರುವುದು ಕೂಡ ಸಂವಿಧಾನದಿಂದ. ಸರ್ಕಾರದ ಮೇಲೆ ಒತ್ತಡ ಹೇರುವ ಹಕ್ಕು ನಮಗೆ ಇದೆ. ಅಸಮರ್ಪಕ ಮತ್ತು ಜನವಿರೋಧಿ ಕಾನೂನನ್ನು ಹಿಂದಕ್ಕೆ ತೆಗೆಯಲು ಸರ್ಕಾರವನ್ನು ಒತ್ತಾಯಿಸುವ ಶಕ್ತಿಯನ್ನೂ ಸಂವಿಧಾನ ನೀಡಿದೆ.

–ಮೌಲ್ಯಾ, ಕಿರುತೆರೆ ನಟಿ